ಖಡಾಖಂಡಿತವಾಗಿ ನುಡಿದ. 'ಈ ವಿಷಯದಲ್ಲಿ ಇನ್ನು ಮಾತು ಬೇಡ..' ಎಂದಾಗ ಜಂಪಯ್ಯನ ಬಾಯಿ ಕಟ್ಟಿತು. ಕಾಯನ ಮನಸ್ಸು ಕಲ್ಲಿನಂತೆ, ಒಮ್ಮೆ ನಿರ್ಧರಿಸಿದ ಎಂದರೆ ಬದಲಾಗದು ಎಂದು ಬಹಳಷ್ಟು ಸಂದರ್ಭಗಳಲ್ಲಿ ಕಂಡು ಅರಿತಿದ್ದ ಜಂಪಯ್ಯ ಕಾಲೆಳೆದುಕೊಂಡು ಹೊರನಡೆದ.

***

ಜಂಪಯ್ಯನ ಮೂಲಕ ವಿಷಯ ತಿಳಿದ ರತ್ನ ಒಳಗೇ ಬೇಸರಿಸಿಕೊಂಡಳು. ದಿನಗಳು ಯಾಂತ್ರಿಕವಾಗಿ ಸಾಗುತ್ತಿದ್ದವು. ಮತ್ತೆ ಅದೇ ಹಳಿಯ ಮೇಲೆ ಬದುಕಿನ ಬಂಡಿ ಬಂದು ಮುಂದೆ ಸಾಗುತ್ತಿತ್ತು. ವೀರಭದ್ರನ ಸಾವು ಒಂದು ಮುಗಿದ ಅಧ್ಯಾಯವಾದರೂ ಅದು ಉಂಟು ಮಾಡಿದ ಗಾಯ ಇನ್ನೂ ಆರಿರಲಿಲ್ಲ. ರತ್ನ ನೋವಿನ ಮೇಲೆ ಮುಸುಕೆಳೆದುಕೊಂಡು ಮತ್ತೆ ಕೆಲಸಗಳಿಗೆ ತನ್ನನ್ನು ಒಡ್ಡಿಕೊಂಡು ಮನಸ್ಸನ್ನು ನೋವಿನ ಕೈಗೆ ಕೊಡದೇ ವ್ಯಸ್ಥಳಾಗಿಸುವ ಪ್ರಯತ್ನ ನಡೆಸಿದಳು. ಕಮಲಿಯನ್ನು ನೋಡುವಾಗಲೆಲ್ಲಾ ಕಾಯ ಏಕೋ ವಿಚಲಿತನಾಗುತ್ತಿದ್ದ. ಎಷ್ಟೇ ಮನಸ್ಸನ್ನು ಸಂಯಮದ ಅಂಕುಶಕ್ಕೊಡಿದ್ದರೂ ಅದು ಜಾರುತ್ತಿತ್ತು. ಆದರೆ ಕಮಲಿಗೆ ಇದಾವುದೂ ತಿಳಿದಿಲ್ಲವಾದ್ದರಿಂದ ಅವಳು ಮಾತ್ರ ಎಂದಿನಂತೆ ಸಹಜವಾಗಿ ವರ್ತಿಸುತ್ತಿದ್ದಳು. ಇವನಿಗೇ ಏನೋ ಕಳೆದುಕೊಂಡಂತೆ ಚಡಪಡಿಕೆ ಉಂಟಾಗುತ್ತಿತ್ತು. ಕಮಲಿಯನ್ನು ನಿರಾಕರಿಸಿದ ಬಳಿಕ ಅವನ ಮನಸ್ಸು ಅವಳೆಡೆಗೆ ಹೆಚ್ಚು ವಾಲುತ್ತಿತ್ತು. ಅವಳನ್ನೇ ನೋಡುತ್ತ ಕುಳಿತು ಬಿಡುತ್ತಿದ್ದ. ಅವಳ ಮುಖವನ್ನು ನೋಡುವಾಗ ರಂಗನ ಆರೈಕೆ ಮಾಡುವಾಗ ಅವನ ಕಣ್ಣೆದುರು ಮಿನಾಲಿ ಮತ್ತು ಸಾರಂಗವೇ ಇರುತ್ತಿದ್ದರು.

ಹೀಗಿರುವಾಗಲೇ ಒಂದು ದಿನ ಬೆಳಿಗ್ಗೆ ಇದ್ದಕ್ಕಿದ್ದಂತೇ ಪಾಂಡುರಂಗನಿಗೆ ವಾಂತಿಬೇಧಿ ಶುರುವಾಯಿತು. ರತ್ನವ್ವ ಎಷ್ಟೇ ಮನೆಮದ್ದು ಮಾಡಿದರೂ ನಿಲ್ಲಲಿಲ್ಲ. ಕ್ರಮೇಣ ಅದು ಸಾಂಕ್ರಾಮಿಕವಾಯಿತೆಂಬಂತೆ, ಮನೆಯವರಿಗೆಲ್ಲಾ ಶುರುವಿಟ್ಟುಕೊಂಡಾಗ ಎಲ್ಲರೂ ತಲ್ಲಣಿಸಿ ಹೋದರು. ಶಿವಯ್ಯನ ಪರಿಸ್ಥಿತಿಯೂ ವಿಕೋಪಕ್ಕೆ ಹೋಯಿತು. ಕಾರಣ ಅರಿಯಲಿಲ್ಲ. ಎಲ್ಲರೂ ಒಟ್ಟುಗೂಡಿ ಚರ್ಚಿಸಿದವರು, ತಡಮಾಡದೇ ಕೂಡಲೇ ಕಾರಗದ್ದೆಗೆ ಹೋಗುವ ನಿರ್ಧಾರ ಕೈಗೊಂಡರು.

ಅಷ್ಟು ದೂರ ನಡೆಯುವ ವ್ಯವಸ್ಥೆ ಇರಲಿಲ್ಲ. ಗೋಪಾಲ ಮತ್ತು ಮಂಜಣ್ಣ ಹೆಣ್ಣುಮಕ್ಕಳನ್ನು ಹೊತ್ತುಕೊಂಡರು. ಜಂಪಣ್ಣ ಶಿವಯ್ಯನನ್ನು ಹೊತ್ತು ನಡೆದರೆ, ಕಾಯ ಪಾಂಡುವನ್ನು ಎತ್ತಿಕೊಂಡ. ಅವನನ್ನು ಹೊತ್ತು ನಡೆವಾಗ ಸಾರಂಗನ ಅಂತಿಮ ಕ್ಷಣಗಳನ್ನೇ ನೆನೆದು ಕಣ್ಣೀರಿಟ್ಟ. ಪಾಂಡು ಕೈಯ್ಯಿಂದ ಜಾರಬಾರದೆನ್ನುವ ತಲ್ಲಣವೇ ಅವನನ್ನು ಅಧೀರಗೊಳಿಸಿತ್ತು. ಕಣ್ಣಿಂದ ಧಾರಾಕಾರ ಕಂಬನಿ ಹರಿಯುತ್ತಿತ್ತು. ಸೇತುವೆಯ ಕಡೆಗೆ ಬಿರುಸಾಗಿ ನಡೆಯುತ್ತಿದ್ದ. ಅವನ ಅಳು ಅಲ್ಲಿದ್ದವರ ಹೃದಯ ಕರಗಿಸಿತ್ತು. ಸ್ವತಃ ಕಮಲಿಯೇ ಅದನ್ನು ಕಂಡು ಅಪ್ರತಿಭಳಾದಳು.

ಕಾಯ ಮುಂದೆ ಹೋಗಿ ಸೇತುವೆಯ ಬಳಿ ಕಾಯುತ್ತ ನಿಂತ. ಬಂದ ವಾಹನವನ್ನು ಹೆಚ್ಚು ಬಾಡಿಗೆ ಕೊಡುವ ಆಮಿಷ ಒಡ್ಡಿ ನಿಲ್ಲಿಸಿಕೊಂಡ. ಎಲ್ಲರೂ ಸೇತುವೆ ಮೇಲೆ ಬಂದ ಬಳಿಕ ಕಾರಗದ್ದೆಯ ಕಡೆಗೆ ಸಾಗಿದರು. ಈ ಸಲ ಕಾಯನೂ ಪಾಂಡುವಿಗಾಗಿ ಅಜ್ಞಾತವಾಸದ ಸಂಕಲ್ಪ ಮುರಿದಿದ್ದ. ಇಷ್ಟು ದಿನ ಕಾರಗದ್ದೆಯನ್ನು ಕಲ್ಪನೆಯಲ್ಲೇ ಕಂಡಿದ್ದ ಕಾಯ ಮೊದಲ ಬಾರಿಗೆ ಅಲ್ಲಿ ಕಾಲಿರಿಸಿದ್ದ. ಆದರೆ ಅದನ್ನು ಕುತೂಹಲದಿಂದ ಗಮನಿಸುವ ಸ್ಥಿತಿಯಲ್ಲಿ ಅವನಿರಲಿಲ್ಲ. ಸರಕಾರಿ ಆಸ್ಪತ್ರೆಗೆ ಎಲ್ಲರೂ ಏಕಾಏಕಿ ಒಂದೇ ಮನೆಯವರು ದಾಖಲಾದಾಗ ಅಲ್ಲಿನ ವೈದ್ಯರು ಇವರನ್ನು ಪರೀಕ್ಷಿಸಿ, ಅವರ ಉದರ ಸ್ಥಿತಿ ಹಾಗೆ ಹಾಳಾಗಲು ಸೇವಿಸಿದ ಯಾವುದೋ ಆಹಾರವೇ ಕಾರಣ ಎಂದು ಮೊದಲ ನೋಟದಲ್ಲೇ ಅಭಿಪ್ರಾಯಪಟ್ಟರು.

ಹಿರಿಯರೆಲ್ಲರಿಗೂ ಬಿಗಡಾಯಿಸಿದ ದೇಹಸ್ಥಿತಿಯನ್ನು ತಾಳಿಕೊಳ್ಳುವ ಶಕ್ತಿ ಇತ್ತು. ಆದರೆ ಪಾಂಡುವಿನ ಪರಿಸ್ಥಿತಿ ಮಾತ್ರ ಬಿಗಡಾಯಿಸಿತ್ತು. ಅವನನ್ನು ಹೆಚ್ಚಿನ ಕಾಳಜಿ ಅಗತ್ಯವಿದ್ದರಿಂದ ಅಲ್ಲಿನ ಖಾಸಗಿ ಆಸ್ಪತ್ರೆಗೆ ಕೂಡಲೇ ಕೊಂಡೊಯ್ಯಲು ತಿಳಿಸಿದರು. ಕಾಯಕನಾಥ ಹಿಂದೆ ಮುಂದೆ ಯೋಚಿಸದೇ ಜಂಪಣ್ಣನೊಂದಿಗೆ ಮಗುವನ್ನೆತ್ತಿಕೊಂಡು ನಡೆದು ಬಿಟ್ಟ. ಪಾಂಡುವನ್ನು ಖಾಸಗಿ ಆಸ್ಪತ್ರೆಯ ತುರ್ತುನಿಗಾ ಕೇಂದ್ರಕ್ಕೆ ಒಯ್ದು ಪರಿಸ್ಥಿತಿ ವಿವರಿಸಿದ ಬಳಿಕ ಅಲ್ಲಿ ದಾಖಲಿಸಲಾಯಿತು. ಕೂಡಲೇ ಚಿಕಿತ್ಸಾ ಕ್ರಮಗಳನ್ನು ಕೈಗೊಳ್ಳಲಾಯಿತು. ಪಾಂಡು ಆಗಲೇ ಸುಸ್ತಿನಿಂದ ಅರ್ಧವಾಗಿ ಹೋಗಿದ್ದ. ಅಜ್ಜರಕಾಡಿನಿಂದ ಇಲ್ಲಿಗೆ ಕರೆತರಲು ಕೆಲವು ಗಂಟೆಗಳೇ ಕಳೆದುಹೋಗಿದ್ದರಂದ ಅವನ ಸ್ಥಿತಿ ವಿಕೋಪಕ್ಕೆ ತಿರುಗಿತ್ತು. ಜಂಪಣ್ಣ ಎಲ್ಲೋ ಹೊರಗೆ ಹೋಗಿ ತನ್ನ ವ್ಯವಹಾರದ ಪರಿಚಯದಲ್ಲಿ ಸಾಲ ಮಾಡಿ ಹಣ ತಂದು ಆಸ್ಪತ್ರೆಗೆ ಕಟ್ಟಿದ. ಅಲ್ಲಿನ ಆಸ್ಪತ್ರೆಯಲ್ಲೂ ಮುಂಚೆ ಅವನ ಊರಿನ ಬಂಧುಗಳ ಆರೈಕೆಯಲ್ಲಿ ಅವನು ನಿಲ್ಲುತ್ತಿದ್ದರಿಂದ ಅವನ ಪರಿಚಯ ಅಲ್ಲಿ ಎಲ್ಲರಿಗೂ ಇತ್ತು. ಆದರೆ ಮಾತನಾಡುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ. ಕಾಯ ಪೂರ್ತಿ ತಳಮಳಿಸಿ ಹೋಗಿದ್ದ.

'ಪಾಂಡುವಿಗೆ ಏನೂ ಆಗಲ್ಲ ತಾನೇ ಜಂಪಣ್ಣ..? ನನ್ಮಗ ಸಾರಂಗನಿಗೂ ಹಾವು ಕಡಿದಾಗ ಹೀಗೇ ವಾಹನ ಸಿಗದೇ ಹೊತ್ತುಕೊಂಡು ಹೋಗಿದ್ದೆ.. ಆದರೆ ಅವನು ಉಳಿಯಲೇ ಇಲ್ಲ.. ಇವನಿಗೂ ಹೀಗೇ ಹೊತ್ತು ತಂದಿದೀನಿ.. ಅದೇ ಮತ್ತೆ ಪುನರಾವರ್ತನೆ ಆಗಿದೆ.. ಪಾಂಡುಗೆ ಏನಾದರೂ ಆದರೆ ನಾನು ಸತ್ತು ಹೋಗ್ತೀನಿ..' ಕಾಯ ಅತ್ತುಬಿಟ್ಟ.

ಜಂಪಣ್ಣನಿಗೆ, ಕಾಯ ಮಗುವನ್ನು ಬಹಳಷ್ಟು ಹಚ್ಚಿಕೊಂಡಿರುವುದನ್ನು ಮನಗಂಡಿದ್ದ. ಆದರೆ ಈಗ ಅದರ ಆಳ ಅರ್ಥ ಮಾಡಿಕೊಂಡಾಗ ಅವನೂ ಮೂಕನಾದ.

'ಏನೂ ಆಗಲ್ಲ ಕಾಯ.. ದೇವರಿದ್ದಾನೆ.. ಆಹಾರದಲ್ಲಿ ಏನೋ ಹೆಚ್ಚುಕಮ್ಮಿ ಆಗಿದೆ.. ನಮಗೆಲ್ಲಾ ಏನೂ ಆಗಿಲ್ಲ ನೋಡು.. ಕಾರಣ ಏನೂಂತ ನೋಡಬೇಕು..' ಜಂಪಯ್ಯ ಸರಕಾರಿ ಆಸ್ಪತ್ರೆ ಮತ್ತು ಖಾಸಗಿ ಆಸ್ಪತ್ರೆಯ ನಡುವೆ ಅಡ್ಡಾಡಿದ. ಅವರೆಲ್ಲರ ಸ್ಥಿತಿ ನಿಯಂತ್ರಣಕ್ಕೆ ಬಂದಿದ್ದರೂ ಚಿಕಿತ್ಸೆಯಲ್ಲಿದ್ದರಿಂದ ಇನ್ನೆರಡು ದಿನ ಆಸ್ಪತ್ರೆಯಲ್ಲಿರಲು ವೈದ್ಯರು ತಿಳಿಸಿದ್ದರು. ಕಾಯ ಮಾತ್ರ ಪಾಂಡುವನ್ನು ಬಿಟ್ಟು ಕದಲಲಿಲ್ಲ. ರಾತ್ರಿ ಕಳೆದು ಬೆಳಗಾದ ಬಳಿಕ ಪಾಂಡುರಂಗನ ಸ್ಥಿತಿ ಹತೋಟಿಗೆ ಬಂದಿತು. ಆ ಬಳಿಕವೇ ಕಾಯ ನೀರು ಮುಟ್ಟಿದ್ದು. ಮರುದಿನ ಅಜ್ಜರಕಾಡಿನಿಂದ ಇವರನ್ನು ನೋಡಲು ಬಂದ ಮಂಜಣ್ಣ ಹೇಳಿದ ಸುದ್ದಿ ಕೇಳಿ ಅವರೆಲ್ಲ ತುಸು ಆತಂಕಕ್ಕೊಳಗಾದರು.

'ನಾವು ಕುಡಿಯಲು ನೀರು ಹಿಡಿಯುವ ಜಾಗದಲ್ಲಿ ಒಂದು ನಾಯಿ ಸತ್ತು ಬಿದ್ದಿತ್ತು. ಕೊಳೆತ ಸ್ಥಿತಿಯಲ್ಲಿತ್ತು. ಆ ನೀರು ನಾವು ಹಿಡಿದು ಸೇವಿಸಿದ್ದರಿಂದ ಹೀಗೆ ಆಗಿರಬಹುದು.. ಹರಿಯುವ ನೀರು ಆದ್ದರಿಂದ ನಮಗೆ ಹೆಚ್ಚಿನ ಅಪಾಯ ಆಗಿಲ್ಲ.. ಆ ನಾಯಿಯನ್ನು ನಾವೆಲ್ಲಾ ಸೇರಿ ಸುಟ್ಟು ಹಾಕಿದೀವಿ.. ಎಲ್ಲರೂ ಮನೇಲಿ ಶೇಖರಿಸಿದ ನೀರು ಚೆಲ್ಲೋದು ಒಳ್ಳೇದು.. ಈ ಮೂರು ದಿನಗಳಲ್ಲಿ ನೀರು ಹರಿದು ತಿಳಿಯಾಗಿರುವುದರಿಂದ ಇನ್ನು ಮೇಲೆ ಸೇವಿಸಬಹುದು.. ಆದರೂ ಮುಂಜಾಗ್ರತೆಯ ಕ್ರಮವಾಗಿ ನೀರು ಸರಿಯಾಗಿ ಕುದಿಸಿ ಆನಂತರ ಬಳಸುವುದು ಒಳಿತು'

ಬಹುಶಃ ಶಿವಯ್ಯನ ಮನೆಯಲ್ಲಿ ಹೆಚ್ಚು ಜನರಿದ್ದ ಕಾರಣ, ನೀರಿನ ಬಳಕೆ ಹೆಚ್ಚಿದ್ದು, ಅವರು ಅದನ್ನು ಬಳಸಿ ಹೀಗೆ ವ್ಯತಿರಿಕ್ತ ಪರಿಣಾಮ ಉಂಟಾಗಿರಬಹುದೆಂದು ಅಂದಾಜಿಸಿದರು. ಮೂರು ದಿನ ಆಸ್ಪತ್ರೆಯ ವಾಸವೇ ನಡೆಯಿತು. ಎಲ್ಲರ ಪರಿಸ್ಥಿತಿ ತಹಬದಿಗೆ ಬಂದ ಬಳಿಕ ಅಜ್ಜರಕಾಡಿಗೆ ಹಿಂತಿರುಗಿದರು. ಎಲ್ಲರೂ ಒಳಗೆ ಶೇಖರಿಸಿಟ್ಟ ನೀರು ಚೆಲ್ಲಿ ಪಾತ್ರೆಗಳನ್ನೆಲ್ಲಾ ಮತ್ತೆ ಮುಂಜಾಗ್ರತಾ ಕ್ರಮವಾಗಿ ತೊಳೆದು ಬಳಸಿದರು. ರಾತ್ರಿ ಎಲ್ಲರೂ ಸೇರಿ ಮಾತಿಗೆ ಕುಳಿತಾಗ ಶಿವಯ್ಯ ಮಿಡುಕಿದ.

'ಮೊದಲೇ ಅಗತ್ಯತೆಗೆ ಹಣ ಹುಟ್ಟುವುದಿಲ್ಲ.. ಅದರ ಮೇಲೆ ಖರ್ಚು'

ಅಲ್ಲೇ ಇದ್ದ ಕಮಲಿ ಮಾತ್ರ ಆ ಮಾತನ್ನು ಬೇರೆಯೇ ರೀತಿಯಲ್ಲಿ ಸ್ವೀಕರಿಸಿದಳು.

'ನನ್ನಿಂದಲೇ ಇದೆಲ್ಲಾ ಸಮಸ್ಯೆ ನಿಮಗೆ.. ನನ್ನಿಂದ ಯಾರಿಗೂ ಸುಖವಿಲ್ಲ..' ಕಮಲಿ ದುಃಖದ ತೀವ್ರತೆಯಲ್ಲಿ ಪ್ರಲಾಪಿಸಿದಳು. ಅವಳ ಧ್ವನಿ ಗದ್ಗದವಾಯಿತು.

'ಅಲ್ಲಿ ಸಮಸ್ಯೆ ಮುಗಿಯಲಿಲ್ಲ ಅಂತ ಇಲ್ಲಿ ಬಂದರೆ ಇಲ್ಲೂ ಹಾಗೆ.. ವೀರಭದ್ರ ಹೋಗ್ಬಿಟ್ಟ.. ಈಗ ಇದು.. ಯಾಕೋ ಜೀವನ ಬೇಡ ಎನಿಸಿ ಬಿಟ್ಟಿದೆ..'

ಕಮಲಿ ಮುಖ ಮುಚ್ಚಿಕೊಂಡು ಬಿಕ್ಕಳಿಸಿದಳು. ಎಲ್ಲರೂ ಅವಳೆಡೆಗೆ ಅನುಕಂಪದ ದೃಷ್ಟಿಯಲ್ಲಿ ನೋಡ ತೊಡಗಿದರೂ ಯಾರಿಗೂ ಅವಳ ಮಾತುಗಳನ್ನು ತಳ್ಳಿ ಹಾಕಬೇಕೆಂದೆನ್ನಿಸಲಿಲ್ಲ. ಸ್ವತಃ ರತ್ನಳಿಗೆ ಕೂಡಾ ಈ ಸಲ ಏಕೋ ಅವಳ ಮಾತು ಹೌದೆನಿಸಿತೋ ಏನೋ.. ಅವಳೂ ಮೌನವಾಗಿದ್ದು ಬಿಟ್ಟಳು. ಒಂದು ಸಾಂತ್ವನದ